

## ಆಚರಣೆಯ ಉದ್ದೇಶ

ಮಾರ್ಚ್ 20ರಂದು 'ವಿಶ್ವ ಬಾಯಿ ಆರೋಗ್ಯ ದಿನ' ಆಚರಿಸಲಾಯಿತು. ಬಾಯಿಯ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು, ಬಾಯಿಯ ಆರೋಗ್ಯವನ್ನು ಸಂರಕ್ಷಿಸುವುದು. ಈ ನಿಟ್ಟಿನಲ್ಲಿ ಧನಾತ್ಮಕವಾದ ವಿಚಾರಧಾರೆಗಳನ್ನು ಮೂಡಿಸಲು ಮತ್ತು ಬಾಯಿಯ ಆರೋಗ್ಯದಿಂದ, ದೇಹದ ಆರೋಗ್ಯದ ಮತ್ತು ವ್ಯಕ್ತಿಯ ವ್ಯಕ್ತಿತ್ವದ ಮೇಲಾಗುವ ಪರಿಣಾಮಗಳ ಬಗ್ಗೆ ಹೊಸ ಚಿಂತನೆಗಳನ್ನು ಮೂಡಿಸುವ ಸಮುದ್ದೇಶವನ್ನು ಈ ಆಚರಣೆ ಹೊಂದಿದೆ.

ಈ ಆಚರಣೆ 2007ರಲ್ಲಿ FDI (ಅಂತರರಾಷ್ಟ್ರೀಯ ದಂತ ಸಂಘ) ಆಚರಣೆಗೆ ತಂದಿತು. FDI ಜನಕರಾದ ಚಾರ್ಲ್ ಗೊಡನ್ ಅವರು ಹುಟ್ಟಿದ ದಿನವಾದ ಸೆಪ್ಟೆಂಬರ್ 12ರಂದು ಈ ಆಚರಣೆಯನ್ನು ಜಾರಿಗೆ ತರಲಾಯಿತು. ಆದರೆ 2013ರಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ 'ವಿಶ್ವ ಬಾಯಿ ಆರೋಗ್ಯ ದಿನ'ವನ್ನು ಮಾರ್ಚ್ 20ಕ್ಕೆ ಬದಲಾಯಿಸಲಾಯಿತು.

ಸಂಖ್ಯೆ ಕಡಿಮೆ ಆದಾಗಲೂ ವಸಡಿನಲ್ಲಿ ರಕ್ತ ಒಸರುತ್ತದೆ. ಉದಾಹರಣೆ ಡೆಂಗಿ ಜ್ವರ ಅಥವಾ ಚಿಕನ್‌ಗುನ್ಯಾ ರೋಗದಲ್ಲಿ ಈ ರೀತಿ ವಸಡಿನಲ್ಲಿ ರಕ್ತ ಒಸರುತ್ತದೆ. ತಂಬಾಕು ವ್ಯಸನಿಗಳಲ್ಲಿ ಬಾಯಿ ಉರಿಯುವುದು, ಬಾಯಿಯಲ್ಲಿ ಬಿಳಿ ಕೆಂಪು ಕಲೆಗಳು ಕಂಡುಬರುತ್ತವೆ. ಅಥವಾ ಬಾಯಿಯಲ್ಲಿ ಒಣಗದೇ ಇರುವ ಹುಣ್ಣುಗಳು ಮತ್ತು ಗಟ್ಟಿಯಾದ ಬಿಳಿ ಬ್ಯಾಂಡ್‌ಗಳು ಕಂಡುಬರುತ್ತದೆ. ಬಾಯಿಯ ಅಂಗಳದ ಭಾಗದಲ್ಲಿ ಮೇಲ್ಪದರ ಹೊತ್ತಿ ಹೋಗಿ ದೊರಗಾಗಿರುತ್ತದೆ. ಏಡ್ಸ್ ರೋಗಿಗಳಲ್ಲಿ ಬಾಯಿಯಲ್ಲಿ ಪದೇ ಪದೇ ಹುಣ್ಣು ಉಂಟಾಗುವುದು. ಬಾಯಿಯಲ್ಲಿ ಗಡ್ಡೆ ಬೆಳೆಯುವುದು, ವಸಡುಗಳಲ್ಲಿ ಗಡ್ಡೆ ಬೆಳೆಯುವುದು ಕಂಡುಬರುತ್ತದೆ. ದೇಹದ ರಕ್ಷಣಾ ವ್ಯವಸ್ಥೆ ಕುಸಿದು ಹೋಗಿ ಹಲ್ಲಿನ ಒಸಡುಗಳ ಸುತ್ತ ಕೀವು ತುಂಬಿಕೊಂಡು ಬಾಯಿ ದುರ್ಗಂಧ ಬರುತ್ತದೆ. ಅಧಿಕ ರಕ್ತದೊತ್ತಡ ಇರುವ ರೋಗಿಗಳಲ್ಲಿ ಮತ್ತು ಅಪಸ್ಮಾರ ರೋಗದಿಂದ ಬಳಲುತ್ತಿರುವ ರೋಗಿಗಳಲ್ಲಿ ಅವರು ತೆಗೆದುಕೊಳ್ಳುವ ಔಷಧಿಯ ಅಡ್ಡ ಪರಿಣಾಮದಿಂದಾಗಿ ಬಾಯಿಯಲ್ಲಿ ವಸಡುಗಳು ಅಡ್ಡಾದಿಡ್ಡಿಯಾಗಿ ಬೆಳೆಯುತ್ತದೆ.



ಕೆಲವೊಮ್ಮೆ ಹಲ್ಲುಗಳೇ ಕಾಣಿಸದಷ್ಟು ರೀತಿಯಲ್ಲಿ ವಸಡುಗಳು ಬೆಳೆಯುತ್ತವೆ. ಮಧುಮೇಹ ರೋಗಿಗಳಲ್ಲಿ ಬಾಯಿ ವಿಪರೀತ ವಾಸನೆ ಇರುತ್ತದೆ. ಎಲ್ಲಾ ಹಲ್ಲುಗಳು ಅಲುಗಾಡುತ್ತಿರುತ್ತವೆ. ಹಲ್ಲಿನ ಸುತ್ತಲಿನ ವಸಡಿನಲ್ಲಿ ಕೀವು ತುಂಬಿಕೊಂಡು ಹಲ್ಲಿನ ಸುತ್ತಲಿರುವ ಎಲುಬುಗಳು ಕರಗಿ ಹೋಗುತ್ತದೆ. ರಕ್ತಹೀನತೆಯಿಂದ ಬಳಲುತ್ತಿರುವವರಲ್ಲಿ ಬಾಯಿಯಲ್ಲಿನ ನಾಲಗೆಯ ಕೆಳ ಭಾಗ ಬಿಳಿಚಿಕೊಂಡಿರುತ್ತದೆ ಮತ್ತು ನಾಲಗೆಯ ಮೇಲ್ಭಾಗ ಬೋಳಾಗಿರುತ್ತದೆ. ವಿಪರೀತ ವೈರಾಣು ಜ್ವರ ಬಂದಾಗಲು ಬಾಯಿಯಲ್ಲಿನ ಪದರುಗಳು ಬಿಳಿಚಿಕೊಂಡಿರುತ್ತದೆ. ದೇಹಕ್ಕೆ ನಿರ್ಜಲೀಕರಣ ಉಂಟಾದಾಗಲೂ ಬಾಯಿ ಒಣಗಿ ಹೋಗುತ್ತದೆ, ಕ್ಯಾನ್ಸರ್ ರೋಗಕ್ಕೆ ವಿಕಿರಣ ಚಿಕಿತ್ಸೆ ನೀಡಿದಲ್ಲಿ ಬಾಯಿಯಲ್ಲಿ ಜೊಲ್ಲುರಸ ಉತ್ಪಾದನೆ ಕಡಿಮೆಯಾಗಿ ಒಣಬಾಯಿ ಉಂಟಾಗುತ್ತದೆ. ಹೀಗೆ ಬಾಯಿಯೊಳಗೆ ಬರಗಾಲ ಉಂಟಾದಾಗ ಹಲ್ಲಿನಲ್ಲಿ ದಂತ ಕ್ಷಯ ಹೆಚಾಗುತ್ತದೆ. ಒಟ್ಟಾರೆಯಾಗಿ ಬಾಯಿ ಎನ್ನುವುದು ಬ್ಯಾಕ್ಟೀರಿಯಾಗಳ ಗುಂಡಿಯಾಗಿದ್ದು, ದೇಹದ ರಕ್ಷಣಾ ವ್ಯವಸ್ಥೆ ಕುಸಿದು ಹೋದಾಗಲೆಲ್ಲಾ ಈ ನಿರುಪದ್ರವಿ ಜೀವಿಗಳು ವಿಜೃಂಭಿಸಿ ಬಾಯಿಯಲ್ಲಿ ಹತ್ತು ಹಲವಾರು ರೋಗಗಳಿಗೆ ಮುನ್ನುಡಿ ಬರೆಯುತ್ತದೆ. ನಮ್ಮ ದೇಹದ ಆರೋಗ್ಯವನ್ನು ಸರಿಯಾಗಿ ಇಟ್ಟುಕೊಂಡಲ್ಲಿ ಬಾಯಿಯಲ್ಲಿ ಉಂಟಾಗುವ ಈ ಎಲ್ಲಾ ತೊಂದರೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು.

ಆರೋಗ್ಯವಂತ ಹಲ್ಲುಗಳು, ನಮ್ಮ ದೇಹದ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಒಬ್ಬ ವ್ಯಕ್ತಿಯ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಪೂರಕವಾಗಿರಲು ಸದೃಢ ಮತ್ತು ಸ್ವಚ್ಛವಾದ ಹಲ್ಲುಗಳು ಅತೀ ಅವಶ್ಯಕ. ನಾವು ನಮ್ಮ ಬಾಯಿಯ ಸ್ವಚ್ಛತೆ, ಹಲ್ಲುಗಳ ಭದ್ರತೆ ಮತ್ತು ಬಾಯಿಯ ಆರೋಗ್ಯವನ್ನು ಕಾಪಾಡದಿದ್ದಲ್ಲಿ ಹತ್ತು ಹಲವಾರು ರೋಗಗಳಿಗೆ ರಹದಾರಿಯಾಗಬಲ್ಲುದು. ನಾವು ತಿನ್ನುವ ಆಹಾರದ ಪಚನಕ್ಕೆ ಮತ್ತು ಜೀರ್ಣಕ್ರಿಯೆಗಳಿಗೆ ಆರೋಗ್ಯ ಪೂರ್ಣ ಹಲ್ಲುಗಳು ಅತೀ ಅವಶ್ಯಕ. ಇಲ್ಲವಾದಲ್ಲಿ ಒಂದಕ್ಕೊಂದು ಸಮಸ್ಯೆಗಳು ಕೂಡಿಕೊಂಡು ವ್ಯಕ್ತಿಯು ರೋಗರುಜಿನಗಳ ಹಂದರವಾಗಬಹುದು.

ಜೀರ್ಣಕ್ರಿಯೆಯಲ್ಲಿ ವ್ಯತ್ಯಾಸ ಉಂಟಾದರೆ ರಕ್ತಹೀನತೆ ಬರಬಹುದು. ರಕ್ತಹೀನತೆಯಿಂದ ಇನ್ನಾವುದೋ ರೋಗಕ್ಕೆ ಮೂಲವಾಗಬಹುದು. ಅದೇ ರೀತಿ ಬಾಯಿಯ ಸ್ವಚ್ಛತೆಯನ್ನು ಕಾಪಾಡಿಕೊಳ್ಳದಿದ್ದಲ್ಲಿ ವಸಡು ರೋಗಗಳು ಹುಟ್ಟಿಕೊಳ್ಳಬಹುದು. ವಸಡು ರೋಗದಿಂದ ಬಳಲುತ್ತಿರುವ ವ್ಯಕ್ತಿಗೆ ಹೃದಯಾಘಾತವಾಗುವ ಸಾಧ್ಯತೆ ಹೆಚ್ಚು.

ಲೇಖಕರು ಮಂಗಳೂರಿನಲ್ಲಿ ಬಾಯಿ, ಮುಖ ಮತ್ತು ದವಡೆ ಶಸ್ತ್ರ ಚಿಕಿತ್ಸಕರು. ಸಂಪರ್ಕ:9845135787